# 4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

**ಸಿಸಿ ನಂ. 20912/2013 ಚಾಸಾಃ 9 ಪ್ರಾಸಾಃ 4**

| | | |
|---|---|---|
| ಸಾಕ್ಷಿದಾರರ ಹೆಸರು | : | ನಂಜಪ್ಪ |
| ತಂದೆಯ ಹೆಸರು | : | ಲೇಟ್ ರಾಮೇಗೌಡ |
| ವಯಸ್ಸು | : | 71 ವರ್ಷ |
| ವೃತ್ತಿ | : | ನಿವೃತ್ತ ಪಿ.ಎಸ್.ಐ |
| ವಾಸ | : | ಸಂಜಯನಗರ, ಬೆಂಗಳೂರು |

**ಸಾಕ್ಷಿಯನ್ನು ದಿಃ 13.08.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಙ್ಞಾ ಹಿ.ಸಾ.ಸ.ಅ ರವರಿಂದಃ-**

ನಾನು 2006 ರಿಂದ 2012 ರವರೆಗೆ ರಾಮಮೂರ್ತಿನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಎ.ಎಸ್.ಐ ಆಗಿ ಕರ್ತವ ನಿರ್ವಹಿಸಿರುತ್ತೇನೆ. ದಿಃ05.05.2011 ರಂದು ನಾನು ಸದರಿ ಪೊಲೀಸ್ ಠಾಣೆಯ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾಗ ಬೆಳಿಗ್ಗೆ 11.50 ರ ಸಮಯದಲ್ಲಿ ಈ ಪ್ರಕರಣದ ದೂರುದಾರರಾದ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂ.132/2011 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಸಂಬಂಧಿಸಿದ ಪ್ರಾಧಿಕಾರಗಳಿಗೆ ಸಲ್ಲಿಸಿರುತ್ತೇನೆ. ದೂರನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದ್ದು, ಸಾಕ್ಷಿದಾರರು ಗುರ್ತಿಸಿದ ತಮ್ಮಸ ಹಿಯನ್ನು ನಿಪಿ-1ಎ ಎಂದು ಗುರ್ತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-2 ಎಂದು ಗುರ್ತಿಸಲಾಯಿತು. ಕಡತವನ್ನು ಮುಂದಿನ ತನಿಖೆಗಾಗಿ ತನಿಖಾಧಿಕಾರಿಗಳಾದ ಚಾಸಾ-10 ರವರಿಗೆ ಹಸ್ತಾಂತರ ಮಾಡಿರುತ್ತೇನೆ.

**<u>ಪಾಟೀ ಸವಾಲುಃ</u> <u>ಆರೋಪಿ ಪರ ಶ್ರೀ. ವಕೀಲರಿಂದಃ</u>**

ಆರೋಪಿ ಸಮಯಕೋರಿದ್ದು ಯಾವುದೇ ಸಕಾರಣ ಇಲ್ಲದಿರುವುದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲನ್ನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**